# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 13

**ಸ್ವಾಮಿ ನಿತ್ಯಸ್ಥಾನಂದ**

‘‘ಒಂದು ದಿನ ಬಾರಾನಗರ ಮಠದಲ್ಲಿ ಸ್ವಾಮಿ ತುರೀಯಾನಂದರು ಭಕ್ತನೊಬ್ಬನಿಗೆ ಈಶ್ವರನ ಸಂಬಂಧವಾಗಿ ಮಾತನಾಡುತ್ತ, ‘ಅವನೇ ವೈಷಮ್ಯ ಮತ್ತು ನೈರ್ಘೃಣ್ಯ ಮುಂತಾದ ದೋಷಗಳಿಲ್ಲದವನು’ ಎಂದು ಹೇಳಿದರು. ಸ್ವಾಮಿ ಅದ್ಭುತಾನಂದರು (ಲಾಟು ಮಹಾರಾಜ್) ಇದನ್ನೆಲ್ಲ ಕೇಳುತ್ತ ಸುಮ್ಮನೆ ಕುಳಿತಿದ್ದರು. ಆ ಭಕ್ತನು ಹೊರಟುಹೋದ ಮೇಲೆ ತುರೀಯಾನಂದರಿಗೆ ಹೇಳಿದರು, ‘‘ನಿನ್ನ ಭಾವ ಚೆನ್ನಾಗಿದೆ. ಈಶ್ವರನು ಶಿಶುವಿದ್ದಂತೆ, ಮತ್ತೆ ನೀನು ತಾಯಿಯಂತೆ ಅದನ್ನು ರಕ್ಷಿಸಲು ಪ್ರಯತ್ನಿಸುತ್ತೀಯೆ?’’ ಈ ಮಾತನ್ನು ಕೇಳಿ ತುರೀಯಾನಂದರು ಉತ್ಸಾಹದಿಂದ ತಮ್ಮ ಪಕ್ಷವನ್ನು ಯುಕ್ತಿಯ ಮೂಲಕ ಸಮರ್ಥಿಸುತ್ತ ಹೇಳಿದರು: ‘‘ಭಗವಂತನು ತನಗಿಷ್ಟ ಬಂದಂತೆ ಮಾಡುವುದಾದರೆ ಅವನು ಒಬ್ಬ despot (ನಿರಂಕುಶ ಪ್ರಭು) ಆಗುತ್ತಾನೆ. ಅವನು ರಶಿಯಾದ ಜಾರ್ (Czar)ನಂತೆ ಸ್ವೇಚ್ಛಾಚಾರಿಯೇನು? ಅವನು ನ್ಯಾಯವಂತ, ದಯಾಳು, ಮಂಗಲಮಯ.’’ ಇದನ್ನು ಕೇಳಿ ಲಾಟೂ ಮಹಾರಾಜರೆಂದರು: ‘‘ ಅದು ಒಳ್ಳೆಯದೆ. ನೀನು ನಿನ್ನ ಭಗವಂತನನ್ನು ಎಲ್ಲ ದೋಷಗಳಿಂದಲೂ ರಕ್ಷಿಸುತ್ತೀಯೆ. ಆದರೆ ರಶಿಯಾದ ಜಾರ್‌ನ ಹಿಂದೆಯೂ ಅವನ ಶಕ್ತಿಯೇ ಇರುವುದೆಂಬುದನ್ನು ಮರೆಯಬೇಡ.’’ ಈ ಮಾತಿನಿಂದ ತುರೀಯಾನಂದರು ತುಂಬ ಸಂತುಷ್ಟರಾದರು.’’

*(ಅದ್ಭುತವಾಣಿ, ಪು.೧೩೩-೩೪)*

ಒಂದು ಯಂತ್ರವು ತುಂಬ ಕೆಲಸ ಮಾಡುತ್ತದೆ. ವಿದ್ಯುಚ್ಛಕ್ತಿಯ ಸಂಪರ್ಕವಿಲ್ಲದಿದ್ದರೆ ಅದು ಸಂಪೂರ್ಣ ನಿಷ್ಕ್ರಿಯವಾಗುತ್ತದೆ. ಆದರೂ ವಿದ್ಯುಚ್ಛಕ್ತಿಗೆ ಕರ್ತೃತ್ವವಿಲ್ಲ. ಅದು ಯಂತ್ರಕ್ಕೆ ಸೇರಿದ್ದು. ಅದಕ್ಕೆ ಭೋಕ್ತೃತ್ವವೂ ಇಲ್ಲ, ಅದು ಯಂತ್ರದ ಫಲಾನುಭವಿಗೆ ಸೇರಿದ್ದು. ವಿದ್ಯುತ್ತಿಗೆ ಇವೆರೆಡೂ ಇಲ್ಲದಿದ್ದರೂ, ಅದಿಲ್ಲದೆ ಇವೆರಡೂ ಇಲ್ಲ. ಹೀಗೆಯೇ ಭಗವಂತನು ಎಲ್ಲದಕ್ಕೂ ಆಧಾರವಾಗಿದ್ದರೂ, ಒಳಿತು ಕೆಡಕುಗಳೆರಡೂ ಅವನ ಶಕ್ತಿಯಿಂದಲೇ ನಡೆಯುವುದಾದರೂ ಅವಾವುವೂ ಅವನಿಗೆ ಅಂಟುವುದಿಲ್ಲ.

## ಪರಬ್ರಹ್ಮನ ಸ್ವರೂಪವೇನು ?

ಶ್ರೀರಾಮಕೃಷ್ಣರು ಮಾತು ಮುಂದುವರೆಸುತ್ತಾರೆ: ‘‘ಬ್ರಹ್ಮ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗುವುದಿಲ್ಲ. ಎಲ್ಲವೂ ಉಚ್ಛಿಷ್ಟವಾಗಿ ಹೋಗಿವೆ — ವೇದ, ಪುರಾಣ, ತಂತ್ರ ಷಡ್ದರ್ಶನ ಇವೆಲ್ಲ ಬಾಯಿಂದ ಹೊರಹೊಮ್ಮಿರುವುದರಿಂದ, ನಾಲಗೆ ಉಚ್ಚರಿಸುವುದರಿಂದ ಉಚ್ಛಿಷ್ಟವಾಗಿವೆ. ಆದರೆ ಕೇವಲ ಒಂದು ವಸ್ತು ಮಾತ್ರ ಉಚ್ಛಿಷ್ಟವಾಗಿಲ್ಲ. ಅದೇ ಬ್ರಹ್ಮ. ಬ್ರಹ್ಮ ಎಂದರೆ ಏನು ಎಂಬುದನ್ನು ಯಾರೂ ಇದುವರೆಗೆ ವರ್ಣನೆ ಮಾಡಲಾಗಿಲ್ಲ.’’

ವಿದ್ಯಾಸಾಗರ ತನ್ನ ಸ್ನೇಹಿತರಿಗೆ ‘‘ಆಹಾ! ಇದು ಬಹಳ ಒಳ್ಳೆ ದಿವ್ಯವಾದ ಮಾತು. ಇಂದು ಒಂದು ಹೊಸ ವಿಷಯವನ್ನೇ ಕಲಿತಕೊಂಡ ಹಾಗಾಯಿತು.’’

ಶ್ರೀರಾಮಕೃಷ್ಣರ ಈ ಮೇಲಿನ ಮಾತು ಅಲ್ಲಮ ಪ್ರಭುಗಳ ಒಂದು ಪ್ರಸಿದ್ಧ ವಚನವನ್ನು ನೆನಪಿಗೆ ತಂದುಕೊಡುತ್ತದೆ:

‘‘ರೂಪವೆಂಬೆನೆ ನೇತ್ರದೆಂಜಲು, ಶಬ್ದವೆಂಬೆನೆ ಶ್ರೋತ್ರದೆಂಜಲು, ಸ್ಪರ್ಶವೆಂಬೆನೆ ತ್ವಕ್ಕಿನೆಂಜಲು, ರುಚಿಯೆಂಬೆನೆ ಜಿಹ್ವೆಯೆಂಜಲು, ಪರಿಮಳವೆಂಬೆನೆ ಘ್ರಾಣದೆಂಜಲು, ನಾನೆಂಬೆನೆ ಅರಿವಿನೆಂಜಲು. ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ ಬೆಳಗು ಗುಹೇಶ್ವರ ಲಿಂಗವು.’’

ಇದೇ ವಿಷಯಕ್ಕೆ ಸಂಬಂಧಪಟ್ಟ ಒಂದು ಕಥೆಯಿದೆ. ಒಬ್ಬ ಶಿಷ್ಯನು ಗುರುವಿನ ಬಳಿಗೆ ಹೋಗಿ, ‘ಆತ್ಮನ ಸ್ವರೂಪವನ್ನು ತಿಳಿಸಿ ಕೊಡಿ’ ಎಂದು ಕೇಳಿಕೊಂಡನು. ಗುರು ಉತ್ತರಿಸದೆ ಸುಮ್ಮನೆ ಕುಳಿತುಕೊಂಡರು. ಎರಡು ಮೂರು ಬಾರಿ ಅದೇ ಪ್ರಶ್ನೆಯನ್ನು ಕೇಳಿದಾಗ ಗುರುವಿನ ಉತ್ತರ ಮೌನವೇ ಆಗಿತ್ತು. ಶಿಷ್ಯನು ಕೊನೆಗೆ ಅಸಮಾಧಾನದಿಂದ, ತನ್ನ ಪ್ರಶ್ನೆಗೆ ಏಕೆ ಉತ್ತರಿಸುತ್ತಿಲ್ಲ ಎಂದು ಕೇಳಿದನು. ಅದಕ್ಕೆ ಗುರು, ‘‘ನಾನು ಉತ್ತರಿಸುತ್ತಿದ್ದೇನೆ, ನೀನು ಅರ್ಥಮಾಡಿಕೊಳ್ಳುತ್ತಿಲ್ಲ. ಮೌನವೇ ಆತ್ಮಾ (**ಉಪಶಾಂತೋಽಯಮಾತ್ಮಾ**)’’ ಎಂದು ಹೇಳಿದನು. ಅಂದರೆ, ಆತ್ಮನ ಬಗ್ಗೆ ಏನೂ ಹೇಳಲಾಗುವುದಿಲ್ಲ, ಮೌನವೇ ಅದರ ಸ್ವರೂಪ. ಶ್ರೀರಮಣ ಮಹರ್ಷಿಗಳನ್ನು ಒಬ್ಬರು, ‘‘ಆತ್ಮನನ್ನು ಪಡೆಯುವುದು ಹೇಗೆ?’’ ಕೇಳಿದಾಗ, ಅವರು ‘‘ಸುಮ್ಮನಿರು’’ ಎಂದು ಉತ್ತರಿಸಿದರಂತೆ. ಅಂದರೆ ಮನಸ್ಸು ಸುಮ್ಮನಾಗಬೇಕು. ಅದು ಆತ್ಮನನ್ನು ಕುರಿತು ಚಿಂತಿಸುವುದೂ ನಿಲ್ಲಬೇಕು. ಆಗ ಆತ್ಮನ ಅರಿವಾಗುತ್ತದೆ.

## ಭಗವಂತನು ಅನುಭವವೇದ್ಯ

ಶ್ರೀರಾಮಕೃಷ್ಣರು ಮಾತು ಮುಂದುವರಿಸಿ ಹೇಳುತ್ತಾರೆ: ‘‘ಜನ ಅನೇಕ ವೇಳೆ ಭಾವಿಸುತ್ತಾರೆ, ತಮಗೆ ಬ್ರಹ್ಮದ ಸ್ವರೂಪ ಏನು ಎಂಬುದು ಅರ್ಥವಾಗಿಬಿಟ್ಟಿದೆ ಎಂಬುದಾಗಿ. ಒಂದು

ಇರುವೆ ಸಕ್ಕರೆ ಬೆಟ್ಟಕ್ಕೆ ಹೋಗಿತ್ತು. ಅದರ ಒಂದು ಕಣ ತಿನ್ನುವುದರೊಳಗೆ ಅದಕ್ಕೆ ಹೊಟ್ಟೆ ತುಂಬಿಕೊಂಡುಬಿಟ್ಟಿತು. ಇನ್ನೊಂದು ಕಣವನ್ನು ಬಾಯಲ್ಲಿ ಇಟ್ಟುಕೊಂಡು ತನ್ನ ಗೂಡಿಗೆ ಹೊರಟಿತು. ಹೋಗುತ್ತ ಇರುವಾಗ ಭಾವಿಸುತ್ತದೆ: ಮುಂದಿನ ಸಲ ಬಂದಾಗ ಈ ಬೆಟ್ಟವನ್ನೇ ಎತ್ತಿಕೊಂಡು ಹೋಗುತ್ತೇನೆ.''

ಸಕ್ಕರೆ ಬೆಟ್ಟದಲ್ಲಿ ಎಷ್ಟು ಹರಳುಗಳಿವೆ ಎಂದು ಎಣಿಸಲಾಗುವುದಿಲ್ಲ. ಹಾಗೆಯೇ ಭಗವಂತನ್ನು ಅಳೆಯಲಾಗುವುದಿಲ್ಲ. ಸಕ್ಕರೆ ಎಷ್ಟಿದೆ ಎಂದು ಅಳೆಯುವ ಆವಶ್ಯಕತೆಯಿಲ್ಲ. ಇರುವೆಯಂತೆ ಸಕ್ಕರೆಯನ್ನು ಸವಿದರೆ ಸಾಕು. ''ಬುದ್ಧಿಯರಿತರು ಹೃದಯವರಿಯದು ತಾಯಿ ದುರ್ಗೆಯ ನಿಜವನು'' ಎಂಬ ಬಂಗಾಳಿ ಹಾಡಿನ ಸಾಲನ್ನು ''ಹೃದಯವರಿತರು ಬುದ್ಧಿಯರಿಯದು'' ಎಂದು ಶ್ರೀರಾಮಕೃಷ್ಣರು ಬದಲಾಯಿಸಿ ಹಾಡಿದರು. ಇದರ ಅರ್ಥ: ಬುದ್ಧಿಯಿಂದ ಆ ಭಗವತ್ತತ್ತ್ವವನ್ನು ಅರಿಯಲಾಗುವುದಿಲ್ಲ. ಏಕೆಂದರೆ ಬುದ್ಧಿಯು ದೇಶ-ಕಾಲ-ನಿಮಿತ್ತಗಳ ಪರಿಧಿಯೊಳಗೆ ಕೆಲಸ ಮಾಡುವಂತಹುದು. ಆದರೆ ಭಗವಂತನು ಇವುಗಳನ್ನು ಮೀರಿದವನು. 'ಹೃದಯವರಿಯುತ್ತದೆ' ಎಂದರೆ ಭಗವಂತನು ಅನುಭವವೇದ್ಯ, ಎಂದು. ಇದು ಹೇಗೆಂದರೆ, ಕೋಪ ಎಂದರೆ ಏನು ಎಂದು ಕೇಳಿದರೆ ಹೇಳಲಾಗುವುದಿಲ್ಲ. ಆದರೆ ಅದನ್ನು ಅನುಭವಿಸಬಹುದು - ಮತ್ತೆ ಮತ್ತೆ ಕೇಳಿದಾಗ!

ಒಂದು ಗ್ರಂಥಾಲಯ. ಅಲ್ಲಿ ಒಂದು ಚಿಕ್ಕ ಮಕ್ಕಳ ವಿಭಾಗವಿತ್ತು. ಪ್ರತಿದಿನವೂ ಒಂದು ಮಗುವು ಬಂದು ವಿಶ್ವಕೋಶದ ಒಂದು ಸಂಪುಟವನ್ನು ಹೊತ್ತುಕೊಂಡು ಆ ಮಕ್ಕಳ ವಿಭಾಗಕ್ಕೆ ಹೋಗುತ್ತಿತ್ತು. ಗ್ರಂಥಾಲಯ ನೋಡಿಕೊಳ್ಳುವವನಿಗೆ ಆಶ್ಚರ್ಯ. ಆ ಚಿಕ್ಕ ಮಗವು ವಿಶ್ವಕೋಶವನ್ನು ಓದುತ್ತದೆಯೇ ಎಂದು ಒಂದು ದಿನ ಪರೀಕ್ಷಿಸಲು ಆ ಮಗುವಿನ ಹಿಂದೆಯೇ ಹೋದನು. ಆ ಮಗುವು ಆ ವಿಶ್ವಕೋಶ ಗ್ರಂಥವನ್ನು ತಾನು ಕುಳಿತುಕೊಳ್ಳುವ ಕುರ್ಚಿಯ ಮೇಲೆ ಇಟ್ಟು ಅದರ ಮೇಲೆ ಕುಳಿತುಕೊಂಡು ಮೇಜಿನ ಮೇಲೆ ಮಕ್ಕಳ ಪುಸ್ತಕವನ್ನು ಇಟ್ಟುಕೊಂಡು ಓದುತ್ತಿತ್ತು. ಕುರ್ಚಿಯು ಆ ಮಗುವಿಗೆ ತುಂಬ ಚಿಕ್ಕದಾಗಿದ್ದುದರಿಂದ ಪುಸ್ತಕವನ್ನು ಇಟ್ಟುಕೊಂಡರೆ ಓದುವುದಕ್ಕೆ ಸುಲಭವಾಗುತ್ತಿತ್ತು. ಆ ಮಗುವಿಗೆ ವಿಶ್ವಕೋಶದ ಮೌಲ್ಯ ಅಷ್ಟೆ. ಹಾಗೆಯೇ ನಾವೂ ಕೂಡ ಅನುಭವಯೋಗ್ಯವಾದ ಸತ್ಯವನ್ನು ಮಾತಿನ ವಸ್ತುವಾಗಿ ಉಪಯೋಗಿಸುತ್ತೇವೆ.

ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ:

**ಇಕ್ಷುಕ್ಷೀರಗುಡಾದೀನಾಂ ಮಾಧುರ್ಯಸ್ಯಾಂತರಂ ಮಹತ್ ।**
**ತಥಾಪಿ ನ ತದಾಖ್ಯಾತುಂ ಸರಸ್ವತ್ಯಾಪಿ ಶಕ್ಯತೇ ॥**

''ಕಬ್ಬು, ಹಾಲು, ಬೆಲ್ಲ ಮುಂತಾದವುಗಳ ರುಚಿಯಲ್ಲಿ ಬಹಳ ವ್ಯತ್ಯಾಸವಿದೆ. ಆದರೂ ಕೂಡ ಅದನ್ನು ವ್ಯಕ್ತಪಡಿಸಲು ಸರಸ್ವತಿಗೂ ಸಾಧ್ಯವಿಲ್ಲ.''

ಹಾಗೆಯೇ ಭಗವಂತನನ್ನು ಅನುಭವಿಸಬಹುದೇ ಹೊರತು ಅನುಭವ ಎಂಥದ್ದು ಎಂದು ಯಾರೂ ಹೇಳಲಾರರು. ಆದ್ದರಿಂದಲೇ ಆ ವಿಷಯವಾಗಿ 'ಮೌನವ್ಯಾಖ್ಯಾ' ಎಂದು ಹೇಳಿರುವುದು.

### ವ್ಯಕ್ತಿತ್ವ ವಿರಶನ

ಶ್ರೀರಾಮಕೃಷ್ಣರು ಈ ವಿಷಯವನ್ನೇ ಮುಂದುವರೆಸುತ್ತ ಹೇಳುತ್ತಾರೆ: ''ಸಮಾಧಿಯಲ್ಲಿ ಬ್ರಹ್ಮಜ್ಞಾನ ದೊರೆಯುತ್ತದೆ- ಬ್ರಹ್ಮದರ್ಶನವಾಗುತ್ತದೆ. ಆ ಅವಸ್ಥೆಯಲ್ಲಿ ವಿಚಾರ ಪೂರ್ತಿಯಾಗಿ ನಿಂತುಹೋಗುತ್ತದೆ. ಮನುಷ್ಯ ಮೂಕನಾಗಿಬಿಡುತ್ತಾನೆ. ಬ್ರಹ್ಮನ ಸ್ವರೂಪವೇನು ಎಂಬುದನ್ನು ವರ್ಣಿಸಲು ಶಕ್ತಿ ಇರುವುದಿಲ್ಲ.''

''ಉಪ್ಪಿನ ಗೊಂಬೆ ಒಮ್ಮೆ ಸಮುದ್ರದ ಆಳ ಕಂಡುಹಿಡಿಯಲು ಹೋಯಿತು (ಎಲ್ಲರೂ ನಗುತ್ತಿದ್ದಾರೆ). ಅದರ ಆಳ ಎಷ್ಟಿದೆ ಎಂಬುದನ್ನು ಪರರಿಗೆ ತಿಳಿಸಬೇಕು ಎಂದು ಅದು ಮನಸ್ಸು ಮಾಡಿಕೊಂಡಿತ್ತು. ಆದರೆ ಅದಕ್ಕೆ ಹಾಗೆ ಮಾಡಲು ಸಾಧ್ಯವೇ ಆಗಲಿಲ್ಲ. ಇಳಿಯೋದೇ ತಡ, ಕರಗಿ ಹೋಯಿತು. ಸಮುದ್ರದ ಆಳ ಎಷ್ಟು ಎಂಬುದನ್ನು ತಿಳಿಸುವುದಕ್ಕೆ ಉಳಿದುಕೊಂಡಿರುವವರು ಯಾರು?''

ತುಂಬ ಬಲವಾದ ವ್ಯಕ್ತಿಭಾವವಿರುವವರನ್ನು (strong sense of individuality) ಕಲ್ಲಿನ ಬೊಂಬೆಗೆ ಹೋಲಿಸಬಹುದು. ಅದು ಮುಳುಗುತ್ತದೆಯೇ ಹೊರತು ಕರಗುವುದಿಲ್ಲ, ಅದರಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಅಂಥವರು ಎಷ್ಟೇ ಭಗವದ್ವಿಷಯವನ್ನು ಕೇಳಿದರೂ, ಸಾಧನೆ ಮಾಡಿದರೂ ಅವರಲ್ಲಿ ಯಾವ ಬದಲಾವಣೆಯೂ ಉಂಟಾಗುವುದಿಲ್ಲ. ಇನ್ನು ಕೆಲವರು ಪ್ಲಾಸ್ಟಿಕ್ ಬೊಂಬೆಯಂಥವರು. ಅದು ನೀರಿನಲ್ಲಿ ಮುಳುಗುವುದೂ ಇಲ್ಲ, ಕರಗುವುದೂ ಇಲ್ಲ. ತೇಲುತ್ತದೆ. ಇಂಥವರು ಧರ್ಮವನ್ನು ಗಂಭೀರವಾಗಿ ಸ್ವೀಕರಿಸುವುದಿಲ್ಲ, ಬಹಳ ಹಗುರವಾಗಿ ಸ್ವೀಕರಿಸುತ್ತಾರೆ. ದೇವರಿಂದ ಸ್ವಲ್ಪ ದೂರವೇ ಇರಬೇಕು. ಅವನನ್ನು ನಮ್ಮ ಪ್ರಯೋಜನಕ್ಕಾಗಿ ಮಾತ್ರ ಬಳಸಿಕೊಳ್ಳಬೇಕು ಎಂದು ಭಾವಿಸುತ್ತಾರೆ. ಶ್ರೀರಾಮಕೃಷ್ಣರು ಸಕ್ಕರೆ ಬೊಂಬೆಯ ಉದಾಹರಣೆಯನ್ನು ಕೊಡದೆ ಉಪ್ಪಿನ ಬೊಂಬೆಯನ್ನೇಕೆ ಕೊಟ್ಟರು? ಸಮುದ್ರದ ನೀರೂ ಉಪ್ಪಾಗಿರುವುದರಿಂದ.

ಒಂದು ಉಪ್ಪಿನ ಬೊಂಬೆಯು ಅಲ್ಲಿ ಅಲ್ಲಿ ಅಡ್ಡಾಡುತ್ತ ಸಮುದ್ರದ ಹತ್ತಿರ ಬಂತು. ಆ ಬೃಹದಾಕಾರದ ಜಲರಾಶಿಯನ್ನು ನೋಡಿ ಅದಕ್ಕೆ ಆಶ್ಚರ್ಯವಾಯಿತು. 'ನೀನು ಯಾರು' ಎಂದು ಸಮುದ್ರವನ್ನು ವಿಚಾರಿಸಿತು. 'ಹತ್ತಿರ ಬಾ, ನಿನಗೆ ಗೊತ್ತಾಗುತ್ತದೆ' ಎಂದು ಸಮುದ್ರ ಅದನ್ನು ಕರೆಯಿತು. ಉಪ್ಪಿನ ಬೊಂಬೆ ಹತ್ತಿರ ಹೋದಷ್ಟೂ ಇನ್ನೂ ಹತ್ತಿರ ಬರುವಂತೆ ಹೇಳಿತು. ಬೊಂಬೆಯು ಹತ್ತಿರ ಹೋಗಿ ನೀರು ಅದನ್ನು ತಗಲುತ್ತಿದ್ದಂತೆ ಅದು ಕರಗತೊಡಗಿತು. ಮುಂದೆ ಹೋದಷ್ಟೂ ಕರಗುತ್ತ ಹೋಯಿತು. ಕೊನೆಗೆ ಒಂದು ಹರಳು ಉಪ್ಪು ಮಾತ್ರ ಉಳಿಯಿತು. ಅದು ತಾನು

ಕರಗುವುದಕ್ಕೆ ಮುಂಚೆ ಹೇಳಿತು. ''ನನಗೀಗ ತಿಳಿಯಿತು. ನಾನು ಯಾರು ಎಂದು.'' *(The Song of the Bird, ಪು. ೧೧೪)* ಇದರಂತೆಯೇ ನಾವು ಭಗವಂತನನ್ನು ಅರಿತುಕೊಂಡರೆ ನಮ್ಮನ್ನೇ ಅರಿತುಕೊಂಡಂತಾಗುತ್ತದೆ. ಭಗವಂತನನ್ನು ಅರಿಯುವುದೆಂದರೆ ನಮ್ಮ ವೈಯಕ್ತಿಕತೆಯನ್ನು ಕಳೆದುಕೊಳ್ಳುವುದು.

ಒಬ್ಬ ಭಕ್ತನು ಕೇಳುತ್ತಾನೆ: ''ಒಬ್ಬನಿಗೆ ಸಮಾಧಿಯಲ್ಲಿ ಬ್ರಹ್ಮ ಜ್ಞಾನ ದೊರೆಯಿತು ಅಂತ ಇಟ್ಟುಕೊಳ್ಳಿ, ಮತ್ತೆ ಆತನ ಬಾಯಿಂದ ಮಾತೇ ಹೊರಡುವುದಿಲ್ಲವೆ?''

ಶ್ರೀರಾಮಕೃಷ್ಣರು: ''ಶಂಕರಾಚಾರ್ಯರು ಲೋಕಶಿಕ್ಷಣ ಕ್ಕಾಗಿ 'ವಿದ್ಯೆಯ ಅಹಂ' ಇಟ್ಟುಕೊಂಡಿದ್ದರು. ಬ್ರಹ್ಮದರ್ಶನ ದೊರೆತ ನಂತರ ಮನುಷ್ಯ ಮೂಕನಾಗಿಬಿಡುತ್ತಾನೆ. ದರ್ಶನ ದೊರೆಯುವವರೆಗೆ ಮಾತ್ರ ವಿಚಾರ. ತುಪ್ಪ ಇನ್ನೂ ಹಸಿ ಯಾಗಿರುವಾಗ ಮಾತ್ರ ಅದು 'ಕಲ ಕಲ' ಅಂತ ಶಬ್ದ ಮಾಡು ತ್ತದೆ. ಚೆನ್ನಾಗಿ ಕಾದಿರುವ ತುಪ್ಪದಲ್ಲಿ ಯಾವ ಶಬ್ದವೂ ಇರದು. ಆದರೆ ಹಸಿಯಾಗಿರುವ ಪೂರಿ ಅದಕ್ಕೆ ಬಿತ್ತು ಎಂದರೆ ಅದು 'ಕಲ ಕಲ' ಅಂತ ಶಬ್ದ ಮಾಡಲಾರಂಭಿಸುತ್ತದೆ. ಪೂರಿ ಬೆಂದೊಡನೆ ಮತ್ತೆ ಶಬ್ದ ನಿಂತು ಹೋಗುತ್ತದೆ. ಅದೇ ರೀತಿಯಾಗಿ ಸಮಾಧಿ ಪಡೆದ ಮನುಷ್ಯ ಲೋಕಶಿಕ್ಷಣಕ್ಕಾಗಿ ಮತ್ತೆ ಕೆಳಕ್ಕೆ ಇಳಿದು ಬಂದು ಮಾತನಾಡಲು ಆರಂಭಿಸುತ್ತಾನೆ.

''ಜೇನುಹುಳು ಹೂವಿನ ಮೇಲೆ ಕೂರದವರೆಗೆ ಝೇಂಕರಿ ಸುತ್ತದೆ. ಹೂವಿನ ಮೇಲೆ ಕುಳಿತು ಮಧುಪಾನ ಮಾಡಲಾ ರಂಭಿಸಿದೊಡನೆಯೇ ಅದರ ಶಬ್ದ ಎಲ್ಲ ನಿಂತುಹೋಗುತ್ತದೆ. ಮಧುಪಾನ ಮಾಡಿಯಾದ ನಂತರ ಮದಿಸಿ ಒಮ್ಮೊಮ್ಮೆ 'ಗುಯ್ಯ್ ಗುಯ್ಯ್' ಅಂತ ಶಬ್ದ ಮಾಡುತ್ತದೆ.

''ಕೊಳದಲ್ಲಿ ಬಿಂದಿಗೆಗೆ ನೀರು ತುಂಬುವಾಗ ಅದು 'ಬಕ್ ಬಕ್' ಅಂಥ ಶಬ್ದ ಮಾಡುತ್ತದೆ. ಪೂರ್ಣವಾಗಿ ತುಂಬಿದ ನಂತರ ಅದು ಯಾವ ಶಬ್ದವನ್ನೂ ಮಾಡದು (ಎಲ್ಲರೂ ನಗುತ್ತಿದ್ದಾರೆ). ಆದರೆ ಅದರಿಂದ ಇನ್ನೊಂದು ಬಿಂದಿಗೆಗೆ ನೀರು ಸುರಿಯುವಾಗ ಮತ್ತೆ ಅದು ಶಬ್ದ ಮಾಡುತ್ತದೆ.''(ನಗು)

ಭಕ್ತನ ಪ್ರಶ್ನೆಗೆ ಶ್ರೀರಾಮಕೃಷ್ಣರು, ಬ್ರಹ್ಮಜ್ಞಾನ ದೊರೆತ ಮೇಲೆ ಒಬ್ಬನು ಮಾತನಾಡುವುದು ಲೋಕಶಿಕ್ಷಣಕ್ಕಾಗಿ ಎಂದು ಉತ್ತರಿಸುತ್ತಾರೆ. ಮಾತನಾಡಲಾಗಲಿ, ಕಾರ್ಯ ಮಾಡಲಾಗಲಿ ಸ್ವಲ್ಪವಾದರೂ 'ನಾನು' ಎಂಬ ಭಾವ ಇರಬೇಕಾಗುತ್ತದೆ. ಅದ ರಿಂದ ಭಗವದಿಚ್ಛೆಗೆ ಅನುಸಾರವಾಗಿ ಬ್ರಹ್ಮಜ್ಞಾನಿಗಳು 'ವಿದ್ಯೆಯ ಅಹಂ' ಅನ್ನು ಇಟ್ಟುಕೊಂಡಿರುತ್ತಾರೆ. ಈ ವಿಷಯವನ್ನು ಶ್ರೀರಾಮಕೃಷ್ಣರು ಸುಂದರವಾದ ಉದಾಹರಣೆಗಳ ಮೂಲಕ ವಿವರಿಸುತ್ತಾರೆ. ಮೊದಲನೆಯ ಉದಾಹರಣೆ ತುಪ್ಪವನ್ನು ಕಾಯಿಸುವುದು. ಬೆಣ್ಣೆಯನ್ನು ಕಾಯಿಸಿ ತುಪ್ಪ ಮಾಡುವಾಗ ಮೊದಲು ಅದು ತುಂಬ ಶಬ್ದ ಮಾಡುತ್ತದೆ, ಅದರಲ್ಲಿ ತೇವಾಂಶ ವಿರುವುದರಿಂದ. ಹಾಗೆಯೇ ಮನಸ್ಸೆಂಬ ಬೆಣ್ಣೆಯನ್ನು ಸಾಧ ನಾಗ್ನಿಯಲ್ಲಿ ಕಾಯಿಸಲು ಪ್ರಾರಂಭಿಸಿದಾಗ, ಅದರಲ್ಲಿ ಅಶುದ್ಧಿಯ ತೇವಾಂಶವಿರುವುದರಿಂದ ತುಂಬ ಚಂಚಲವಾಗು ತ್ತದೆ, ತುಂಬ ಕುಣಿದಾಡುತ್ತದೆ. ಆಗ ಸಾಧಕನಿಗೆ, ತಾನು ಆಧ್ಯಾ ತ್ಮಿಕ ಜೀವನ ಪ್ರಾರಂಭಿಸುವುದಕ್ಕೆ ಮುಂಚೆಯೇ ಎಷ್ಟೋ ಚೆನ್ನಾ ಗಿದ್ದೆ ಎಂದೆನಿಸುತ್ತದೆ. ಕ್ರಮೇಣ ಶಬ್ದವು ಕಡಿಮೆಯಾಗಿ, ಮನಸ್ಸು ಶಾಂತವಾಗುತ್ತದೆ, ನಿಃಶಬ್ದವಾಗುತ್ತದೆ. ಆಗ ಬ್ರಹ್ಮಾನಂದವಾಗು ತ್ತದೆ. ಕಾದ ತುಪ್ಪಕ್ಕೆ ಹಸಿಯಾದ ಪೂರಿಯನ್ನು ಹಾಕಿದಾಗ ಮತ್ತೆ ಶಬ್ದ ಮಾಡುತ್ತದೆ. ಪೂರಿ ಬೆಂದ ಮೇಲೆ ಮತ್ತೆ ನಿಃಶಬ್ದ. ಹಾಗೆಯೇ ಜ್ಞಾನಿಯು ಶಿಷ್ಯರಿಗೆ ತರಬೇತಿ ನೀಡುವಾಗ ಮಾತ ನಾಡಬೇಕಾಗುತ್ತದೆ. ಅಪಕ್ವವಾದ ಶಿಷ್ಯರು ಪಕ್ವವಾದ ಮೇಲೆ ಮತ್ತೆ ಮಾತಿಲ್ಲ.

ಶ್ರೀರಾಮಕೃಷ್ಣರು ಕೊಡುವ ಇನ್ನೊಂದು ಉದಾಹರಣೆ ಜೇನು ಹುಳು. ಜೇನು ಹುಳದ ಮೊದಲನೆಯ ಶಬ್ದವು ಸಾಧಕನ ಸ್ವಪ್ರಯತ್ನವನ್ನು ಪ್ರತಿನಿಧಿಸುತ್ತದೆ. ಬ್ರಹ್ಮಾನುಭವದ ಸಮಯ ದಲ್ಲಿ ಸ್ವಪ್ರಯತ್ನವಿಲ್ಲ, ಅಲ್ಲಿ ಪ್ರಯತ್ನ ಮಾಡುವವರೇ ಇರುವು ದಿಲ್ಲ. ಆ ಸ್ಥಿತಿಯಿಂದ ಹೊರಬಂದಮೇಲೆ ತಮ್ಮ ಅನುಭವವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಪ್ರಯತ್ನವಿರುತ್ತದೆ. ಮೂರ ನೆಯ ಉದಾಹರಣೆ ಬಿಂದಿಗೆ ಮತ್ತು ನೀರು. ಬಿಂದಿಗೆಗೆ ನೀರು ತುಂಬುವಾಗ ಅದರ ಒಳಗಿರುವ ಗಾಳಿ ಹೊರನುಗ್ಗುವುದರಿಂದ ಬಕ್ ಬಕ್ ಎಂದು ಶಬ್ದವಾಗುತ್ತದೆ. ನಾವು ಸಾಧನೆಯಲ್ಲಿ ಮುಂದುವರಿದಷ್ಟೂ ನಮ್ಮ ಅಹಂಕಾರವು ಹೊರಕ್ಕೆ ಹೋಗುವು ದನ್ನು ಇದು ಸೂಚಿಸುತ್ತದೆ. ಅಹಂಕಾರವು ಸಂಪೂರ್ಣ ಹೊರಟು ಹೋಯಿತೆಂದರೆ ಸಾಧಕನ ವ್ಯಕ್ತಿತ್ವವು ಭಗವಂತನಿಂದ ತುಂಬಿ ಹೋಗುತ್ತದೆ. ಮತ್ತೆ ಭಕ್ತರಿಗೆ ಉಪದೇಶ ನೀಡುವಾಗ ಸ್ವಲ್ಪ ಶಬ್ದ ವಾಗಬಹುದು ಅಥವಾ ಮೌನವೇ ಉಪದೇಶವಾಗಬಹುದು. ಬಿಂದಿಗೆಯ ನೀರನ್ನು ಇನ್ನೊಂದು ಪಾತ್ರೆಗೆ ಸುರಿಯುವಾಗ ಸ್ವಲ್ಪ ಶಬ್ದವಾಗುವಂತೆ.

### ಕಲಿಯುಗಕ್ಕೆ ಭಕ್ತಿಯೇ ಸೂಕ್ತ

ಶ್ರೀರಾಮಕೃಷ್ಣರು ತಮ್ಮ ಉಪದೇಶವನ್ನು ಮುಂದುವರಿಸು ತ್ತಿದ್ದಾರೆ: ''ಕಲಿಯುಗದಲ್ಲಿ ಅನ್ನಗತಪ್ರಾಣ; ದೇಹಬುದ್ಧಿ ಸುಲಭ ವಾಗಿ ಹೋಗದು. ಮನುಷ್ಯ ಈ ಅವಸ್ಥೆಯಲ್ಲಿರುವಾಗ 'ಸೋಽಹಂ' ಎಂಬುದಾಗಿ ಹೇಳುವುದು ಒಳ್ಳೆಯದಲ್ಲ. ಪ್ರಾಪಂ ಚಿಕ ಎಲ್ಲ ಕೆಲಸಗಳಲ್ಲಿ ತೊಡಗುತ್ತ 'ನಾನು ಬ್ರಹ್ಮ' ಎಂದು ಹೇಳಿ ಕೊಳ್ಳುವುದು ಸರಿಯಲ್ಲ. ಯಾರ ಕೈಯಲ್ಲಿ ವಿಷಯವಸ್ತುಗಳನ್ನು ತ್ಯಾಗಮಾಡಲು ಸಾಧ್ಯವಿಲ್ಲವೋ, ಯಾರ 'ಅಹಂ' ಬಡಪೆಟ್ಟಿಗೆ ಹೋಗಲೊಲ್ಲದೋ ಅವರು 'ನಾನು ದಾಸ' 'ನಾನು ಭಕ್ತ' ಎಂಬ ಭಾವನೆಯನ್ನು ಇಟ್ಟುಕೊಂಡಿರುವುದು ಒಳ್ಳೆಯದು. ಭಕ್ತಿ ಮಾರ್ಗದಲ್ಲಿ ಹೋದರೂ ಅವನ ಸಾಕ್ಷಾತ್ಕಾರವನ್ನು ಪಡೆಯ ಬಹುದು.''

ತುಂಬ ದೇಹಬುದ್ಧಿ ಇರುವಾಗ 'ಸೋऽಹಂ' ಎನ್ನುವುದು ಪ್ರಾಮಾಣಿಕವಾಗಿರುವುದಿಲ್ಲ. 'ನಾನು ದೇಹವಲ್ಲ' ಎಂದು ಹೇಳುವುದು ಕೇವಲ ಶಬ್ದಗಳು. ಈ ಸ್ಥಿತಿಯಲ್ಲಿ 'ನಾನು ದೇಹ' ಎನ್ನುವುದೂ ಒಂದೆ, ''ನಾನು ದೇಹವಲ್ಲ' ಎನ್ನುವುದೂ ಒಂದೇ. ನಮ್ಮ ನಿತ್ಯ ಜೀವನದ ಎಲ್ಲ ಚಟುವಟಿಕೆಗಳೂ ನಮ್ಮ ಎಲ್ಲ ಭಾವನೆಗಳೂ ದೇಹಕ್ಕೆ ಸಂಬಂಧಪಟ್ಟಿರುವಾಗ 'ಸೋऽಹಂ' ಎನ್ನುವುದಕ್ಕೆ ಯಾವ ಅರ್ಥವೂ ಇರುವುದಿಲ್ಲ. ನಾನು ದೇಹವಲ್ಲ, ಆತ್ಮ ಎಂದು ಹೇಳುತ್ತಾ ಏನು ಬೇಕಾದರೂ ಮಾಡುವವರಿದ್ದಾರೆ. ಎಲ್ಲ ಕೆಲಸಗಳೂ ದೇಹಕ್ಕೆ ಸಂಬಂಧಪಟ್ಟವು; ನನಗೂ ಅವಕ್ಕೂ ಸಂಬಂಧವಿಲ್ಲ ಎಂದು ಅವರು ಸಮರ್ಥಿಸಿಕೊಳ್ಳುತ್ತಾರೆ. ಕೊಲೆ ಮಾಡಿದ ಒಬ್ಬ ಅಪರಾಧಿಯು ನ್ಯಾಯಾಧೀಶನ ಮುಂದೆ, 'ಕೊಲೆಯಾದದ್ದು ದೇಹದಿಂದ, ನಾನು ಕೊಲೆ ಮಾಡಲಿಲ್ಲ' ಎಂದು ವಾದ ಮಾಡಿದನಂತೆ. ನ್ಯಾಯಾಧೀಶನಿಗೂ ಸ್ವಲ್ಪ ವೇದಾಂತ ತಿಳಿದಿತ್ತು. ಅವನು ಹೇಳಿದನಂತೆ, ''ಹಾಗಿದ್ದರೆ ನಾವು ನಿನ್ನ ದೇಹವನ್ನು ಗಲ್ಲಿಗೇರಿಸುತ್ತೇವೆ. ನಿನ್ನನ್ನಲ್ಲ'' ಎಂದನಂತೆ.

### ಎರಡು ಮಾರ್ಗಗಳು

ಶ್ರೀರಾಮಕೃಷ್ಣರು ಹೇಳುವಂತೆ ಭಕ್ತಿಮಾರ್ಗದ ಮೂಲಕವೂ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು. ಆಧ್ಯಾತ್ಮಿಕ ಸಾಧನಾ ಕ್ಷೇತ್ರದಲ್ಲಿ ಮುಖ್ಯವಾಗಿ ಎರಡು ಮಾರ್ಗಗಳನ್ನು ನಾವು ಗುರುತಿಸಬಹುದು: ಜ್ಞಾನಮಾರ್ಗ ಮತ್ತು ಭಕ್ತಿಮಾರ್ಗ. ಕರ್ಮಮಾರ್ಗವು ಇವೆರಡಕ್ಕೂ ಪೂರಕವಾಗಿರುತ್ತದೆ. ಧ್ಯಾನ ಮಾರ್ಗವು ಜ್ಞಾನ ಮತ್ತು ಭಕ್ತಿಗಳೆರಡಕ್ಕೂ ಸಮಾನವಾಗಿದೆ. ಜ್ಞಾನಿ ಮತ್ತು ಭಕ್ತರಿಬ್ಬರೂ ಕರ್ಮ ಮಾಡುತ್ತಾರೆ. ಜ್ಞಾನಿಯಾದವನು, ಕರ್ಮವು ಪ್ರಕೃತಿಗೆ, ಅಂದರೆ ಪ್ರಕೃತಿಯ ಭಾಗಗಳಾದ ದೇಹೇಂದ್ರಿಯ ಮನಸ್ಸುಗಳಿಗೆ ಸೇರಿದುದು. ಆತ್ಮನು ನಿಷ್ಕ್ರಿಯ. ಎಂಬ ಮನೋಭಾವದಿಂದ ನಿರ್ಲಿಪ್ತನಾಗಿ ಕರ್ಮ ಮಾಡುತ್ತಾನೆ. ಇಬ್ಬರ ವಿಷಯದಲ್ಲಿಯೂ ಕೊನೆಯಲ್ಲಿ ಎಲ್ಲ ಬಗೆಯ ಹರ್ಷವೂ ನಿಂತುಹೋಗಿ ಇಬ್ಬರೂ ಆತ್ಯಂತಿಕ ಸತ್ಯದಲ್ಲಿ ಒಂದಾಗಿ ಬಿಡುತ್ತಾರೆ. ಹಾಗೆಯೇ ಇಬ್ಬರೂ ಧ್ಯಾನ ಮಾಡುತ್ತಾರೆ – ಜ್ಞಾನಿಯು ಆತ್ಮನನ್ನು ಕುರಿತು ಧ್ಯಾನ ಮಾಡುತ್ತಾನೆ, ಭಕ್ತನು ಭಗವಂತನನ್ನು ಕುರಿತು ಧ್ಯಾನ ಮಾಡುತ್ತಾನೆ. ಇಬ್ಬರೂ ಸಮಾಧಿಸ್ಥಿತಿಯನ್ನು ತಲುಪಿದಾಗ ಇಬ್ಬರೂ ಒಂದೇ ಸತ್ಯದಲ್ಲಿ ಒಂದಾಗುತ್ತಾರೆ. ಇದಕ್ಕಾಗಿಯೇ ಭಾಗವತದಲ್ಲಿ ಶ್ರೀಕೃಷ್ಣನು ಮೂರು ಮಾರ್ಗಗಳನ್ನು ಸೂಚಿಸಿದ್ದಾನೆ :

**ಯೋಗಾಸ್ತ್ರಯೋ ಮಯಾ ಪ್ರೋಕ್ತೋ ನೃಣಾಂ ಶ್ರೇಯೋ ದಿದೃಕ್ಷಯೇ।**
**ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋऽನ್ಯೋऽಸ್ತಿ ಕರ್ಹಿಚಿತ್ ॥**

''ಮನುಷ್ಯರ ಶ್ರೇಯೋಕಾಂಕ್ಷೆಗಾಗಿ ನಾನು ಹಿಂದೆ ಮೂರು ಯೋಗಗಳನ್ನು ಬೋಧಿಸಿದೆನು. ಅವಾವುವೆಂದರೆ ಜ್ಞಾನ, ಕರ್ಮ ಮತ್ತು ಭಕ್ತಿ. ಇವಕ್ಕಿಂತ ಬೇರೆ ಯಾವ ಉಪಾಯವೂ ಇಲ್ಲ.''

ಜ್ಞಾನ ಮತ್ತು ಭಕ್ತಿಗಳ ನಡುವಿನ ವ್ಯತ್ಯಾಸವನ್ನು ಈ ಕೆಳಗಿನಂತೆ ಚಿತ್ರಿಸಬಹುದು: ೧) ಜ್ಞಾನ ವ್ಯಕ್ತಿನಿಷ್ಠವಾದುದು, ಅಂದರೆ ಜ್ಞಾನಿಯು ತನ್ನ ನೈಜಸ್ವರೂಪವಾದ ಆತ್ಮಚಿಂತನೆ ಮಾಡುತ್ತಾನೆ. ಭಕ್ತಿ ವಸ್ತುನಿಷ್ಠವಾದುದು. ಅಂದರೆ ಭಕ್ತನು ತನ್ನ ಹೊರಗೆ ಭಗವಂತನನ್ನು ಪ್ರೀತಿಸಿ ಪೂಜಿಸುತ್ತಾನೆ. ೨) ಜ್ಞಾನಮಾರ್ಗದಲ್ಲಿ ಸ್ವಪ್ರಯತ್ನ ಮುಖ್ಯ, ಭಕ್ತಿಯೋಗದಲ್ಲಿ ದೇವರ ಅನುಗ್ರಹವೇ ಮುಖ್ಯ. ಇಲ್ಲಿ ಶರಣಾಗತಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ೩) ಜ್ಞಾನಮಾರ್ಗದಲ್ಲಿ ಮುಕ್ತಿಯನ್ನು ಪಡೆಯುವುದೇ ಗುರಿ. ಆದರೆ ಭಕ್ತಿಮಾರ್ಗದಲ್ಲಿ ಭಕ್ತಿಯೇ ಸರ್ವಸ್ವ. ೪) ಜ್ಞಾನಮಾರ್ಗದಲ್ಲಿ ವಿಚಾರವೇ ಮುಖ್ಯ. ಭಕ್ತಿಯೋಗದಲ್ಲಿ ಪ್ರೀತಿಯೇ ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಭಕ್ತಿಮಾರ್ಗವಾದರೋ ಭಾವನಾ ಶಕ್ತಿಯ ದೈವೀಕರಣ — ಅಂದರೆ ಭಾವನಾಶಕ್ತಿಯನ್ನು ಭಗವದ್ಭಕ್ತಿಯನ್ನಾಗಿ ಪರಿವರ್ತಿಸುವುದು ಮುಖ್ಯ.

ಈ ಎರಡೂ ಮಾರ್ಗಗಳೂ ವೇದಕಾಲದಿಂದಲೂ ಒಂದಾದ ಮೇಲೆ ಮತ್ತೊಂದು ಪ್ರಧಾನವಾಗುತ್ತ ಅಲೆಯೋಪಾದಿಯಲ್ಲಿ ಹರಿದು ಬಂದಿದೆ. ಪೂರ್ವವೈದಿಕ ಯುಗದಲ್ಲಿ ಧರ್ಮವು ಭಕ್ತಿ ಪ್ರಧಾನವಾಗಿತ್ತು ಎನ್ನಬಹುದು. ವೇದಗಳ ಸಂಹಿತಾಭಾಗದಲ್ಲಿ ಅನೇಕ ದೇವ-ದೇವತೆಗಳಿಗೆ ಸಂಬಂಧಿಸಿದ ಪ್ರಾರ್ಥನಾ ಮಂತ್ರಗಳು ಕಂಡುಬರುತ್ತವೆ. ಆಗಿನ ಕಾಲದ ಜನರು ಭಗವಂತನನ್ನು ಇಂದ್ರ, ವರುಣ, ಮುಂತಾದ ವಿವಿಧ ದೇವತೆಗಳ ರೂಪದಲ್ಲಿ ಪೂಜಿಸುತ್ತಿದ್ದರೆಂದು ಹೇಳಬಹುದು. ಕ್ರಮೇಣ ಇದು ಯಾಗ ಯಜ್ಞಾದಿ ಅನೇಕ ಸಂಕೀರ್ಣವಾದ ಕ್ರಿಯಾವಿಧಿಗಳ(rituals) ರೂಪವನ್ನು ಪಡೆಯಿತು. ಸಾಮಾನ್ಯವಾಗಿ ಭಕ್ತಿಪ್ರಧಾನ ಧರ್ಮವು ಸಂಕೀರ್ಣ ಕ್ರಿಯಾವಿಧಿಗಳ ರೂಪದಲ್ಲಿ ಕ್ರಮೇಣ ಅವನತಿಯನ್ನು ಹೊಂದುತ್ತದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಜ್ಞಾನಪ್ರಧಾನ ಧರ್ಮದ ಅಲೆಯೇಳುತ್ತದೆ.

ಇಂತಹ ಅಲೆಯು ವೈಷ್ಣವ ಧರ್ಮ, ಶೈವಧರ್ಮ ಮುಂತಾದ ರೂಪಗಳಲ್ಲಿ ಮೇಲೆದ್ದಿತು. ಬೌದ್ಧಧರ್ಮವೂ ಭಕ್ತಿಪ್ರಧಾನ ಧರ್ಮವಾಗಿ ಪರಿಣಮಿಸಿತು. ಬುದ್ಧನನ್ನೇ ದೇವರೆಂದು ಪೂಜಿಸುವಂತಾಯಿತು. ಈ ಧರ್ಮಾಂದೋಲನವೂ ಮುಂದೆ ವಿಚಿತ್ರ ಕ್ರಿಯಾ ವಿಧಿಗಳು, ವಿಕೃತ ಆಚರಣೆಗಳು, ಮೂಢನಂಬಿಕೆಗಳು ಮುಂತಾದ ರೂಪದಲ್ಲಿ ಅವನತಿಯ ಹಾದಿಯನ್ನು ಹಿಡಿಯುತ್ತಿದ್ದಾಗ ಶ್ರೀ ಶಂಕರಾಚಾರ್ಯರೇ ಮುಂತಾದ ಆಚಾರ್ಯಶ್ರೇಷ್ಠರ ರೂಪದಲ್ಲಿ ಜ್ಞಾನಪ್ರಧಾನ ಧರ್ಮದ ಬೃಹತ್ ಅಲೆ ಎದ್ದಿತು. ಈ ಭರತದ ಇಳಿಮುಖಾವಸ್ಥೆಯಲ್ಲಿ ಭಕ್ತಿಯ ಅಲೆಯೊಂದು ಮೇಲೆದ್ದು ಅದು ಮುಂದೆ ದೊಡ್ಡ ಪ್ರವಾಹವಾಗಿ ದೇಶದಾದ್ಯಂತ ಹರಡಿತು. ಅನೇಕ ಪಂಥಗಳಿಗೆ ಸೇರಿದ ಅನೇಕಾನೇಕ ಸಂತಶ್ರೇಷ್ಠರು ಮೈತಳೆದು ಜನಸಾಮಾನ್ಯರೆಲ್ಲರಿಗೂ ಈ ಭಕ್ತಿ ಸುಧಾಮೃತವನ್ನು ಉಣಬಡಿಸಿದರು. ಆಧುನಿಕ ಯುಗದಲ್ಲಿ ಜ್ಞಾನ ಭಕ್ತಿಗಳೆಂಬ ಈ ಎರಡು ನದಿಗಳು ಹತ್ತಿರವಾಗುತ್ತ ಬಂದು ಶ್ರೀರಾಮಕೃಷ್ಣರಲ್ಲಿ ಅವು ಒಂದುಗೂಡಿದವು, ಮತ್ತು ಈ ಸಮನ್ವಯ ಧರ್ಮವು ರಾಮಕೃಷ್ಣ ಮಹಾಸಂಘದ ರೂಪದಲ್ಲಿ ಮುಂದುವರಿಯುತ್ತಿದೆ. *(ಮುಂದುವರಿಯುವುದು)*